## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 76 (884) |
| ಸದಸ್ಯರ ಹೆಸರು | : ಶ್ರೀ ಎಸ್ ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 15-12-2025 |
| ಉತ್ತರಿಸುವ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೆ.ಸಿ.ಎಸ್.ಆರ್ (KCSR) ನಿಯಮ ಅಥವಾ ಸರ್ಕಾರದ ಇತರೆ ಯಾವುದೇ ನಿಯಮಗಳಲ್ಲಿ ಸರ್ಕಾರಿ ನೌಕರರಿಗೆ ನಿಗದಿಪಡಿಸಿದ ಕಾರ್ಯಭಾರ ಮತ್ತು ಕರ್ತವ್ಯದ ಅವಧಿ ಎಷ್ಟು: ಸರ್ಕಾರಿ/ಅನುದಾನಿತ/ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ನೇಮಕಾತಿ ಸಂದರ್ಭದಲ್ಲಿ ಒಂದು ವಿಷಯಕ್ಕೆ ಒಂದು ಉಪನ್ಯಾಸಕರ ಅಥವಾ ಕನಿಷ್ಠ ಕಾರ್ಯಭಾರ ಅಥವಾ ಇತರೆ ಯಾವ ಮಾನದಂಡದಲ್ಲಿ ನೇಮಕಾತಿ ಮಾಡಲಾಗುತ್ತದೆ: | **<u>ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ:</u>**<br>• ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುವ ಉಪನ್ಯಾಸಕರಿಗೆ ವಾರದಲ್ಲಿ ಪ್ರಾಯೋಗಿಕವಲ್ಲದ ವಿಷಯಗಳ ಉಪನ್ಯಾಸಕರಿಗೆ 20 ಗಂಟೆಗಳ ಕಾರ್ಯಭಾರ ಮತ್ತು ಪ್ರಾಯೋಗಿಕ ವಿಷಯಗಳ ಉಪನ್ಯಾಸಕರಿಗೆ 24 ಗಂಟೆಗಳ ಕಾರ್ಯಭಾರವನ್ನು ನಿಗದಿಪಡಿಸಲಾಗಿದೆ.<br>• ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ನೇಮಕಾತಿಯು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಅಧಿಸೂಚಿತ ವಿಷಯಗಳ ಸ್ನಾತಕೋತ್ತರ ಪದವಿಯಲ್ಲಿ ಶೇಕಡ 55 ಅಂಕಗಳೊಂದಿಗೆ ಬಿ.ಇಡಿ. ಪದವಿಯನ್ನು ಹೊಂದಿರಬೇಕು ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಅಧಿಸೂಚಿತ ವಿಷಯಗಳ ಸ್ನಾತಕೋತ್ತರ ಪದವಿಯಲ್ಲಿ ಶೇಕಡ 50 ಅಂಕಗಳೊಂದಿಗೆ ಬಿ.ಇಡಿ. ಪದವಿಯನ್ನು ಹೊಂದಿರಬೇಕು ಎಂಬ ಮಾನದಂಡವನ್ನು ವಿಧಿಸಲಾಗಿರುತ್ತದೆ.<br><br>**<u>ಅನುದಾನಿತ ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ:</u>**<br>• ಬೋಧಕ ಸಿಬ್ಬಂದಿಗಳಿಗೆ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) (ಶೈಕ್ಷಣಿಕ, ಆಡಳಿತ, ನೋಂದಣಿ ಹಾಗೂ ಸಹಾಯಾನುದಾನ ಇತ್ಯಾದಿ) 2024ರ ನಿಯಮ 17ರ SCHEDULE-IVರನ್ವಯ ಕಾರ್ಯಭಾರವನ್ನು ನಿಗಧಿಪಡಿಸಲಾಗಿದೆ. ಅದರಂತೆ ಪ್ರಾಯೋಗಿಕ ವಿಷಯಗಳಿಗೆ 24 ಗಂಟೆಗಳು ಹಾಗೂ ಪ್ರಾಯೋಗಿಕವಲ್ಲದ ವಿಷಯಗಳಿಗೆ 20 ಗಂಟೆಗಳ ಕಾರ್ಯಭಾರ ಇರುತ್ತದೆ. ಕಾರ್ಯಭಾರವನ್ನು SCHEDULE-IV ರಲ್ಲಿರುವಂತೆ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಲೆಕ್ಕಾಚಾರ ಮಾಡುವ ಕ್ರಮವಿರುತ್ತದೆ. |
| ಆ) | ಸರ್ಕಾರಿ/ಅನುದಾನಿತ/ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಯಾವುದೇ ವಿಷಯದ ಉಪನ್ಯಾಸಕರ ಹುದ್ದೆಗೆ ಇಲಾಖೆ ನಿಗದಿಪಡಿಸಿದ ಕನಿಷ್ಠ ಕಾರ್ಯಭಾರವಿಲ್ಲದಿದ್ದಲ್ಲಿ, ಆ ಹುದ್ದೆಯನ್ನು ಖಾಲಿ ಹುದ್ದೆ ಯೆಂದು ಪರಿಣಿಸಲಾಗುತ್ತದೆಯೇ: ಅಥವಾ ಹುದ್ದೆಯನ್ನು ರದ್ದು ಪಡಿಸಲಾಗುತ್ತದೆಯೇ: ಸರ್ಕಾರಿ/ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ/ ವೇತನಾನುದಾನಕ್ಕೆ ಒಳಪಡಿಸುವಾಗ ಕನಿಷ್ಠ | |

<table>
<tr>
<td></td>
<td>ಕಾರ್ಯಭಾರದ ಷರತ್ತಿನೊಂದಿಗೆ ನೇಮಕಾತಿ/ವೇತನಾನುದಾನಕ್ಕೆ ಒಳಪಡಿಸಲಾಗಿದೆಯೇ:</td>
<td rowspan="2">• ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಮೇಲಿನ ನಿಯಮದಂತೆ ಕಾರ್ಯಭಾರವನ್ನು ಹೊಂದಿದ್ದಲ್ಲಿ ನೇಮಕಾತಿಗೆ ಇತರೆ ಮಾನದಂಡಗಳನ್ನು ಪೂರೈಸಿರುವುದನ್ನು ಖಚಿತಪಡಿಸಿಕೊಂಡು ಹುದ್ದೆ ಭರ್ತಿಗೆ ಅವಕಾಶ ನೀಡಲಾಗುವುದು.<br>• ಜೊತೆಗೆ ಸರ್ಕಾರ/ಇಲಾಖೆಯು ನಿಗಧಿಪಡಿಸಿರುವ ಮಾನದಂಡಗಳಾದ ನಿಗಧಿತ ಕಾರ್ಯಭಾರ, ದಾಖಲಾತಿ, ಫಲಿತಾಂಶ, ಆಡಳಿತ ಮಂಡಳಿ ವ್ಯಾಜ್ಯ ಹೊಂದಿರದ ಹಾಗೂ ನಿಯಮಗಳನ್ವಯ ಇತರೆ ಅಂಶಗಳನ್ನು ಪೂರೈಸಿರುವುದನ್ನು ಖಚಿತಪಡಿಸಿಕೊಂಡು ವೇತನಾನುದಾನಕ್ಕೆ ಒಳಪಡಿಸಲಾಗುವುದು.<br>• ವೇತನಾನುದಾನಕ್ಕೆ ಒಳಪಟ್ಟ ಬೋಧಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಿಗೆ ಕನಿಷ್ಟ ಕಾರ್ಯಭಾರ ಉಂಟಾದ ಪಕ್ಷದಲ್ಲಿ 2024ರ ನಿಯಮದ, ನಿಯಮ 27ರ ಉಪನಿಯಮ 04 ರಲ್ಲಿ ಉಪನ್ಯಾಸಕರ ಕಾರ್ಯಭಾರವನ್ನು ಸರಿದೂಗಿಸುವ ಸಂಬಂಧ ಈ ಕೆಳಕಂಡ ನಿಯಮವಿರುತ್ತದೆ:<br>"(4) The Deputy Director of the district shall ensure the existence of requisite workload specified under these rules after the closure of the admission process of that academic year.<br>• ನಿಯಮ 17ರ ಉಪನಿಯಮ (3) ರನ್ವಯ ಮತ್ತು 27ರ ಉಪನಿಯಮ 6(a)ರನ್ವಯ ಕಾರ್ಯಭಾರವನ್ನು ಸರಿದೂಗಿಸುವ ಸಂಬಂಧ ನಿಯಮ ಈ ಕೆಳಗಿನಂತಿರುತ್ತದೆ:<br>(17)(3): If a vacancy in a subject arises in an aided private pre-university college and the work load is 10 hours (12 hours in case of practical subjects) and if there is a lecturer in that subject with 10 hours (12 hours in case of practical subjects) work load who is working in another aided pre university college located within a distance of about 20 kms, then no recruitment shall be permitted against such a vacancy and the lecturer with 10 hours (12 hours in case of practical subjects) work load in the latter college shall teach another 10 hours (12 hours in case of practical subjects) in the former college.</td>
</tr>
<tr>
<td>ಇ)</td>
<td>ಇಲಾಖಾ ನಿಯಮಾನುಸಾರ ಸರ್ಕಾರಿ/ಅನುದಾನಿತ/ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಕನಿಷ್ಟ ಹಾಗೂ ಗರಿಷ್ಟ ಕಾರ್ಯಭಾರವೆಷ್ಟು: [ಸರ್ಕಾರಿ/ಅನುದಾನಿತ/ಪದವಿ ಪೂರ್ವ ಕಾಲೇಜುಗಳ] ಉಪನ್ಯಾಸಕರಿಗೆ ಕನಿಷ್ಟ ಕಾರ್ಯಭಾರವನ್ನು ಸರಿದೂಗಿಸಲು ವಾರದಲ್ಲಿ ಮತ್ತೊಂದು ಪದವಿ ಪೂರ್ವ ಕಾಲೇಜಿಗೆ ನಿಯೋಜನೆ ಮಾಡಿದ್ದಲ್ಲಿ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣದ ಜೊತೆಗೆ ಉತ್ತಮ ಫಲಿತಾಂಶ ಪಡೆಯಲು ಸಾಧ್ಯವೇ:</td>
</tr>
</table>

ಮತ್ತು

"(27)(6)(a): After the closure of admissions for an academic year, if the admission of students is less than the number necessary for fulfilling the requisite workload, the Deputy Director of the respective district shall take necessary steps to depute the lecturer with less workload to another Aided Pre-University College with heavy workload. No deputation to Government Pre-University College shall be done by the Deputy Director to ensure requisite workload.

- ಈ ಮೇಲಿನ ನಿಯಮಗಳ ಪ್ರಕಾರ ಕನಿಷ್ಟ ಕಾರ್ಯಭಾರವನ್ನು ಹೊಂದಿದ ಉಪನ್ಯಾಸಕರಿಗೆ ಕನಿಷ್ಟ ಕಾರ್ಯಭಾರವಿರುವ ಮತ್ತೊಂದು ಅನುದಾನಿತ ಪದವಿ ಪೂರ್ವ ಕಾಲೇಜಿಗೆ ಹೊಂದಾಣಿಕೆ ಮಾಡಿ ಕಾರ್ಯಭಾರವನ್ನು ಸರಿದೂಗಿಸಲಾಗುವುದು.
- ಕನಿಷ್ಟ ಕಾರ್ಯಭಾರವನ್ನು ಹೊಂದಿರದ ಹುದ್ದೆಗಳನ್ನು ಖಾಲಿ ಹುದ್ದೆಗಳೆಂದು ಪರಿಗಣಿಸಲಾಗುವುದಿಲ್ಲ, ಹಾಗೂ ಹುದ್ದೆಯನ್ನು ರದ್ದುಪಡಿಸಲಾಗುವುದಿಲ್ಲ.
- ಈ ಮೇಲಿನ ನಿಯಮಗಳಂತೆ, ಕನಿಷ್ಟ ಕಾರ್ಯಭಾರವನ್ನು ಹೊಂದಿರುವ ಉಪನ್ಯಾಸಕರನ್ನು ಮತ್ತೊಂದು ಅನುದಾನಿತ ಪದವಿ ಪೂರ್ವ ಕಾಲೇಜಿನ ಕಾರ್ಯಭಾರವಿರುವ ಹುದ್ದೆಗೆ ನಿಯೋಜಿಸಿ ಕಾರ್ಯಭಾರವನ್ನು ಸರಿದೂಗಿಸಲು ಅವಕಾಶವಿರುತ್ತದೆ.
- ಈ ರೀತಿಯ ಹೊಂದಾಣಿಕೆಯಿಂದ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ಮೂಲ ಕಾಲೇಜಿನಲ್ಲಿ 03 ದಿನಗಳು ಹಾಗೂ ನಿಯೋಜಿಸಿದ ಕಾಲೇಜಿನಲ್ಲಿ 03 ದಿನಗಳ ಸಂಪೂರ್ಣ ಕಾರ್ಯಭಾರ ದೊರೆಯುತ್ತದೆ.
- ಮೂಲ ಕಾಲೇಜಿನ ಹಾಗೂ ನಿಯೋಜಿತ ಕಾಲೇಜಿನ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ದೊರೆಯುತ್ತದೆ. ಇದರಿಂದಾಗಿ ಫಲಿತಾಂಶವು ಸುಧಾರಣೆಗೊಳ್ಳುತ್ತದೆ.

**ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ:**

ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಆಯಾ ಕಾಲೇಜಿನ ಆಡಳಿತ ಮಂಡಳಿಗಳೇ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವಾಗಿರುತ್ತಾರೆ. ಅನುದಾನರಹಿತ ನೇಮಕಾತಿ ಪ್ರಕ್ರಿಯೆಯು ಆಯಾ ಆಡಳಿತ ಮಂಡಳಿಯ

| | | |
|---|---|---|
| | | ಜವಾಬ್ದಾರಿಯಾಗಿರುವುದರಿಂದ, ಕಾರ್ಯಭಾರದ ಹೊಣೆಗಾರಿಕೆಯು ಆಡಳಿತ ಮಂಡಳಿಗಳ ವ್ಯಾಪ್ತಿಗೆ ಒಳಪಡುತ್ತದೆ. |
| ಈ) | ಈಗಾಗಲೇ ಮಾನ್ಯ ಶಿಕ್ಷಣ ಸಚಿವರು ಸದನದಲ್ಲಿ ಭರವಸೆ ನೀಡಿದಂತೆ ಸರ್ಕಾರಿ ಆದೇಶ: ಇಪಿ 09 ಟಪಿಯು 2024 ದಿನಾಂಕ: 12.09.2024ನ್ನು ಪೂರ್ವಾನ್ವಯಗೊಳಿಸಿ ಶೂನ್ಯ ಕಾರ್ಯಭಾರ ಹೊಂದಿರುವವರನ್ನು ಸೇವೆಯಿಂದ ವಿಮುಕ್ತಿಗೊಳಿಸಿರುವ ಉಪನ್ಯಾಸಕರಿಗೆ ಶಾಶ್ವತ ಪರ್ಯಾಯ ವ್ಯವಸ್ಥೆ ಮಾಡಿ ಸೇವೆಗೆ ಸೇರಿಸಿಕೊಂಡು ಸೇವೆಗೆ ಭದ್ರತೆಯನ್ನು ನೀಡಲಾಗಿದೆಯೇ: | • ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) (ಶೈಕ್ಷಣಿಕ, ಆಡಳಿತ, ನೋಂದಣಿ ಹಾಗೂ ಸಹಾಯಾನುದಾನ ಇತ್ಯಾದಿ) 2024ರ ನಿಯಮ 27ರ ಉಪ ನಿಯಮ 06(b) ರನ್ವಯ ಕಾರ್ಯಭಾರ ಇಲ್ಲದ ಸಂದರ್ಭದಲ್ಲಿ ಸೇವಯಿಂದ ವಿಮುಕ್ತಿಗೊಳಿಸುವ ಬಗ್ಗೆ ನಿಯಮವಿರುತ್ತದೆ. ನಿಯಮದ ಉದ್ಧೃತ ಭಾಗ ಕೆಳಗಿನಂತಿದೆ:<br><br>"27(6)(b): If the minimum student's strength of 40 students per subject and language is not maintained or fulfilled for consecutive two academic years, then the grant-in-aid shall be stopped and steps shall be taken to transfer the aided employee to another vacant aided post either under same Managing Committee or different Managing Committee. However, if no aided vacancy is available, steps shall be taken to retrench or terminate the aided employee as per section 98 of the Act and rule 10 of Karnataka Educational Institutions (Recruitment and Terms and Conditions of Service of Employees in Private Aided Primary and Secondary Institutions) Rules 1999."<br>• ಈ ಮೇಲಿನ ನಿಯಮದಂತೆ 02 ವರ್ಷಗಳಲ್ಲಿ ಸತತವಾಗಿ ಕನಿಷ್ಟ ವಿದ್ಯಾರ್ಥಿಗಳ ದಾಖಲಾತಿ ಇಲ್ಲದ ಪಕ್ಷದಲ್ಲಿ ವೇತನಾನುದಾನವನ್ನು ತಡೆಹಿಡಿದು, ಪೂರ್ಣ ಕಾರ್ಯಭಾರವನ್ನು ಹೊಂದಿರುವ ಅನುದಾನಿತ ಹುದ್ದೆಗೆ ವರ್ಗಾವಣೆ ಮಾಡಲು ಅವಕಾಶವಿದೆ.<br>• ಒಂದು ವೇಳೆ ಖಾಲಿ ಹುದ್ದೆ ಲಭ್ಯವಿಲ್ಲದ ಪಕ್ಷದಲ್ಲಿ ನಿಯಮಗಳಂತೆ ಸೇವೆಯಿಂದ ವಿಮುಕ್ತಿಗೊಳಿಸ ಬೇಕಾಗುತ್ತದೆ.<br>• ಆದರೆ, ಈ ರೀತಿ ವಿಮುಕ್ತಿಗೊಳಿಸಿದ ನಂತರದಲ್ಲಿಯೂ ಸಹ The Karnataka educational institutions (recruitment of employees in private aided primary and secondary educational institutions) rules 1999ರ ನಿಯಮ 11(06)ರನ್ವಯ ಕಾರ್ಯಭಾರ ಹೊಂದಿರುವ ಖಾಲಿ ಹುದ್ದೆ ಲಭ್ಯವಾದಲ್ಲಿ ಪುನಃ ಸೇವೆಗೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. |

| | | |
|---|---|---|
| ಉ) | ಈ ಆದೇಶದಂತೆ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಶೂನ್ಯ ಕಾರ್ಯಭಾರ ಅಥವಾ ಕನಿಷ್ಠ ಕಾರ್ಯಭಾರವನ್ನು ಸರಿದೂಗಿಸಲು ಯಾವುದೇ ಅನುದಾನಿತ ಹುದ್ದೆಗಳಿಲ್ಲದಿದ್ದಾಗ ಸೇವೆಯಿಂದ ವಿಮುಕ್ತಿಗೊಳಿಸದೆ ಸೇವಾ ಭದ್ರತೆಯನ್ನು ನೀಡುವ ನಿಟ್ಟಿನಲ್ಲಿ ಶಾಶ್ವತ ಪರ್ಯಾಯ ವ್ಯವಸ್ಥೆಯನ್ನು ಮಾಡಲು ಈ ಆದೇಶವನ್ನು ತಿದ್ದುಪಡಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆಯೆ: (ಸಂಪೂರ್ಣವಾದ ಮಾಹಿತಿ ನೀಡುವುದು) | ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) (ಶೈಕ್ಷಣಿಕ, ಆಡಳಿತ, ನೋಂದಣಿ ಹಾಗೂ ಸಹಾಯಾನುದಾನ ಇತ್ಯಾದಿ) 2024ರ ನಿಯಮ 27ರ ಉಪ ನಿಯಮ 06(b) ರನ್ವಯ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಶೂನ್ಯ ಕಾರ್ಯಭಾರವಿರುವ ಉಪನ್ಯಾಸಕರನ್ನು ನಿಯೋಜನೆ ಮಾಡಲು ಯಾವುದೇ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಹುದ್ದೆ ಲಭ್ಯವಿಲ್ಲದಿದ್ದಾಗ ಸೇವೆಯಿಂದ ವಿಮುಕ್ತಿಗೊಳಿಸದೆ ಪರ್ಯಾಯ ವ್ಯವಸ್ಥೆ ಮಾಡಲು ಅವಕಾಶ ಇರುವುದಿಲ್ಲ. |

ಸಂಖ್ಯೆ: ಇಪಿ 391 ಡಿಜಿಡಬ್ಲೂ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು